**ದಿನಾಂಕಃ08.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನನ್ನ ಸಾಕ್ಷಿ ವಿಚಾರಣೆ, ಹೇಳಿಕೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯ ಎಲ್ಲಾ ಸತ್ಯವಾಗಿರುತ್ತದೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

| |
|---|
| ಓಪಿಡಿ ದಾಖಲೆಯನ್ನು ಇತ್ತೀಚಿನ ಪರೀಕ್ಷಾ ವರದಿಯೊಂದಿಗೆ ಹಾಜರುಪಡಿಸಿದ್ದು ಅದನ್ನು **ನಿ.ಪಿ.17** ಎಂದು, |
| ಎಕ್ಸರೇ ಫಿಲ್ಮ್ ಅನ್ನು ಹಾಜರುಪಡಿಸುತ್ತಿದ್ದು ಅದನ್ನು **ನಿ.ಪಿ.18** ಎಂದು ಗುರುತಿಸಲಾಯಿತು. |

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ. ಬಿ.ಟಿ.ಆರ್ ವಕೀಲರಿಂದಃ**

ನಾನು ಗಾಯಾಳುವನ್ನು ಖುದ್ದಾಗಿ ಪರೀಕ್ಷಿಸಿರುವುದಿಲ್ಲ ಎಂದರೆ ಸರಿ. ಅಂಗನ್ಯೂನ್ಯತೆಯನ್ನು ಮಾತ್ರ ಪರೀಕ್ಷಿಸಿರುತ್ತೇನೆ ಎಂದರೆ ಸರಿ. ಚಿಕಿತ್ಸೆ ನೀಡಿದ ವೈದ್ಯರಿಂದ ನಾನು ಮಾಹಿತಿ ಪಡೆದಿರುವುದಿಲ್ಲ ಎಂದರೆ ಸರಿ. ಅನುಸರಣ ಚಿಕಿತ್ಸಾ ವರದಿಯನ್ನು ನೋಡಿರುವುದಿಲ್ಲ ಎಂದರೆ ಸರಿ. ಗಾಯಾಳುವಿನ ವೃತ್ತಿಯ ಬಗ್ಗೆ ನನಗೆ ತಿಳಿದಿರುವುದಿಲ್ಲ. ಗಾಯಗಳು ಗುಣಮುಖವಾಗಿವೆ ಎಂದರೆ ಸಾಕ್ಷಿಯು ಮೇಲ್ನೋಟಕ್ಕೆ ಕಾಣುವ ಗಾಯಗಳು ಮಾತ್ರ ಗುಣಮುಖವಾಗಿವೆ ಎಂದು ನುಡಿಯುತ್ತಾರೆ. ಹೆಚ್ಚಿನ ಅಂಗನ್ಯೂನ್ಯತೆಯ ನಮೂದಿಸಿರುತ್ತೀರಿ ಎಂದರೆ ಸರಿಯಲ್ಲ. ಪ್ರಮಾಣ ಪತ್ರಿಕೆಯ 3 ನೇ ಖಂಡಿಕೆಯಲ್ಲಿ ಹೆಚ್ಚಿನ ಪ್ರಮಾಣದ ಶೇಕಡವಾರು ಅನ್ನು ನಮೂದಿಸಿರುತ್ತೀರಿ ಎಂದರೆ ಸರಿಯಲ್ಲ. ಗಾಯಾಳುವಿನ ದಿನನಿತ್ಯದ ಕೆಲಸಗಳಲ್ಲಿ ಭಾಗಿಯಾಗಲು ತೊಂದರೆ ಇರುವುದಿಲ್ಲ ಎಂದರೆ ಕಷ್ಟ ಸಾಧ್ಯ ಎಂದು ನುಡಿಯುತ್ತಾರೆ. ಗಾಯಾಳು ಎಲೆಕ್ಟ್ರಿಕ್ ಕೆಲಸ ಮಾಡುವ ಕಾರಣ ಅವರಿಗೆ ಯಾವುದೇ ರೀತಿ ತೊಂದರೆ ಉಂಟಾಗುವುದಿಲ್ಲ ಎಂದರೆ ಕಷ್ಟ ಸಾಧ್ಯ ಎಂದು ನುಡಿಯುತ್ತಾರೆ. Upper limb ಗೆ ಅಂಗನ್ಯೂನ್ಯತೆಯನ್ನು 1/3$^{rd}$ ಎಂದು ಪರಿಗಣಿಸಬೇಕು ಎಂದರೆ ಸರಿಯಲ್ಲ. ಗಾಯಾಳುವಿಗೆ ಸಹಾಯ ಮಾಡಲು ಅಂಗನ್ಯೂನ್ಯತೆಯನ್ನು ಹೆಚ್ಚಿನ ಪ್ರಮಾಣದಲ್ಲಿ ನಮೂದಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ನಾನು ಗಾಯಾಳುವಿಗೆ ಚಿಕಿತ್ಸೆ ನೀಡದ ಕಾರಣ ಅಂಗನ್ಯೂನ್ಯತೆಯನ್ನು ನಿರ್ಧರಿಸಲು ಸೂಕ್ತ ವ್ಯಕ್ತಿಯಲ್ಲ ಎಂದರೆ ಸರಿಯಲ್ಲ. ನಮ್ಮ ಆಸ್ಪತ್ರೆಯಲ್ಲಿ ಎಸಿ ಜಾಯಿಂಟ್ ಚಿಕಿತ್ಸೆ ನೀಡುತ್ತಾರೆ ಎಂದರೆ ಸರಿ. ನಿಮ್ಮ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಲ್ಲಿ ಚಿಕಿತ್ಸಾ ವೆಚ್ಚ ಕಡಿಮೆಯಾಗುತ್ತದೆ ಎಂದರೆ ಸಾಕ್ಷಿಯು ಸ್ವಲ್ಪ ಪ್ರಮಾಣಲ್ಲಿ ಕಡಿಮೆಯಾಗುತ್ತದೆ ಎಂದು ನುಡಿಯುತ್ತಾರೆ. ಗಾಯಾಳುವಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**(ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು